ವಿಷಯ:- ಸೂಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ದುರಸ್ಥಿ.

54(384)

ಶ್ರೀ ಎಸ್. ಅಂಗಾರ (ಸೂಳ್ಯ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1994 ರಿಂದ 1996ರ ವರೆಗೆ ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸ ಡಾಂಬರೀಕರಣ ಹಾಗೂ ರಸ್ತೆ ದುರಸ್ತಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಅನುದಾನ ಒದಗಿಸಲಾಗಿತ್ತು;

ಆ) ಬಿಡುಗಡೆ ಮಾಡಲಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಎಷ್ಟು ಕಿಮೀ. ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಮಾಡಲಾಗಿದೆ; ಈ ಕಾಮಗಾರಿಗೆ ಆದ ಖರ್ಚು ಎಷ್ಟು; ಹಾಗೂ ಉಳಿಕೆ ಹಣ ಎಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸ ಡಾಂಬರೀಕರಣಕ್ಕಾಗಿ 1994-95 ರಲ್ಲಿ 16.00 ಲಕ್ಷ ರೂ. 1995-96ರಲ್ಲಿ 22.00 ಲಕ್ಷ ರೂ.ಗಳು ಮತ್ತು ದುರಸ್ತಿಗಾಗಿ 1994-95ರಲ್ಲಿ 32.75 ಲಕ್ಷ ರೂ.ಗಳು, 1995-96 ರಲ್ಲಿ 33.08 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿತ್ತು.

ಆ) ಕಾಮಗಾರಿಗಳ ವಿವರ ಅನುಬಂಧ- 1,2 ಹಾಗೂ 3 ರಲ್ಲಿ ನೀಡಿದೆ.

ಅನುಬಂಧ- 1

ನಮೂನೆ- 1

ಸುಳ್ಯ ಕ್ಷೇತ್ರ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	1994-95	1995-96		
			ಅನುದಾನ	ವೆಚ್ಚ	ಅನುದಾನ	ವೆಚ್ಚ
1	2	3	4	5	6	7
1.	5054 ಡಾಂಬರೀಕರಣ	ಸುಳ್ಯ ತಾಲೂಕು ಎಲಿಮಲೆ-ಅರಂತೋಡು ರಸ್ತೆ ಕಿಮೀ. 8.25 ರಿಂದ 13.025 ರವರೆಗೆ ಡಾಂಬರೀಕರಣ.	3.00	1.46	5.00	8.08
2.	5054-ಪ್ರತೀ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ (20 ಲಕ್ಷಗಳ ಕಾರ್ಯಕ್ರಮ).	ಸುಳ್ಯ-ಉಬರಡ್ಡ-ಮಿತ್ತೂರು ರಸ್ತೆಯ ಆಯ್ದ ಭಾಗಗಳಲ್ಲಿ (1.50 ರಿಂದ 2.40)	2.00	2.70	1.75	1.20
3.	-''-	ಕಾಣಿಯೂರು-ಚಾರ್ವಾಕ-ಬರೆಪ್ಪಾಡಿ ರಸ್ತೆಯ ಆಯ್ದ ಭಾಗಗಳಲ್ಲಿ ಜಲ್ಲಿ ಹಾಕಿ ಡಾಂಬರೀಕರಣ. (ಕಿಮೀ 0.40 ರಿಂದ 2.50).	2.50	0.94	2.25	2.19
4.	-''-	ಅಯ್ಯನಕಟ್ಟೆ-ಚೊಕ್ಕಾಡಿ-ಬೆಂಗಮಲ್ ರಸ್ತೆಯ ಆಯ್ದ ಭಾಗಗಳಲ್ಲಿ ಡಾಂಬರೀಕರಣ	2.50	0.90	2.25	2.47
5.	-''-	-ಅದೇ- (ಕಿ.ಮೀ. 7.10 ರಿಂದ 8.50)	2.00	-	1.75	2.80
6.	-''-	ಸುಳ್ಯ ಉಬರಡ್ಡ-ಮಿತ್ತೂರು ರಸ್ತೆಯ ಕಿಮೀ. 3.40 ರಿಂದ 4.20 ರವರೆಗೆ ಡಾಂಬರೀಕರಣ.	1.00	1.20	1.00	0.82
					9.00	9.54

1	2	3	4	5	6	7
7.	5054-ಪ್ರತೀ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ (20 ಲಕ್ಷಗಳ ಕಾರ್ಯಕ್ರಮ).	ಪುತ್ತೂರು ತಾಲೂಕು ಕಾಣಿಯೂರು-ಚಾರ್ವಾಕ ಬರೆಪ್ಪಾಡಿ-ರಸ್ತೆ ಕಿಮೀ 0 ದಿಂದ 0.45 ರವರೆಗೆ ಡಾಂಬರೀಕರಣ.	-	0.36		
8.	-''-	ಸುಳ್ಯ ತಾಲೂಕು ಅಯ್ಯಕಟ್ಟೆ-ಚೊಕ್ಕಾಡಿ-ಬೆಂಗಮಲ್ ರಸ್ತೆ ಕಿಮೀ. 9.85 ರಿಂದ 10.30 ರ ವರೆಗೆ ಡಾಂಬರೀಕರಣ.	-	0.69		
9.	-''-	ಅಯ್ಯನಕಟ್ಟೆ-ಚೊಕ್ಕಾಡಿ ಬೆಂಗಮಲ್ ರಸ್ತೆ ಕಿಮೀ. 10.30 ರಿಂದ 10.90 ರವರೆಗೆ ಡಾಂಬರೀಕರಣ.	-	0.96		
10.	-''-	ಉಬರಡ್ಡ-ಮಿತ್ತೂರು ರಸ್ತೆ ಕಿಮೀ. 0.50 ರಿಂದ 1.10 ರವರೆಗೆ ಡಾಂಬರೀಕರಣ.	-	0.99	-	-
			10.00	8.74		
11.	-''-	30 ಲಕ್ಷಗಳ ಕಾರ್ಯಕ್ರಮ	-	-	7.00	-
					16.00	9.54
12.	5054 ಮೇಲ್ದಜೇಗೇರಿಸಿದ ರಸ್ತೆಗಳ ಅಭಿವೃದ್ಧಿ.	ಸುಳ್ಯ ತಾಲೂಕು ಪುದೊಟ್ಟು ಬೆಳ್ಳಾರೆ ರಸ್ತೆ ಕಿಮೀ. 5.4 ರಿಂದ 7.60 ರವರೆಗೆ ಡಾಂಬರೀಕರಣ.	3.00	-	2.00	3.10
			3.00	-	1.00	3.10
		ಒಟ್ಟು ರೂ. ಲಕ್ಷಗಳು	16.00	10.20	22.00	20.72

ಅನುಬಂಧ-2

ನಮೂನೆ-2

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	1994-95	1995-96
1.	ಸುಳ್ಯ ತಾಲ್ಲೂಕು ಮೈಸೂರು-ಬಂಟ್ವಾಳ ರಸ್ತೆ ಕಿಮೀ. 149 ರಿಂದ 150 ರವರೆಗೆ ಆಯ್ದ ಭಾಗಗಳಲ್ಲಿ ನವೀಕರಣ.	66857	-
2.	-ಅದೇ- ಕಿಮೀ. 148.80 ರಿಂದ 149 ರವರೆಗೆ ಆಯ್ದ ಭಾಗಗಳಲ್ಲಿ ನವೀಕರಣ.	36118	-
3.	-ಅದೇ- ಕಿಮೀ 171 ರಿಂದ 171.40 ಕಿಮೀ.	37321	-
4.	-ಅದೇ- ಕಿಮೀ 171.40 ರಿಂದ 171.80 ವರೆಗೆ	35018	-
5.	-ಅದೇ- ಕಿಮೀ 176 ರಿಂದ 178 ರವರೆಗೆ	39666	-
6.	-ಅದೇ- ಕಿಮೀ 174.60 ರಲ್ಲಿ	-	48660
7.	-ಅದೇ- ಕಿಮೀ 175 ರಿಂದ 175.40 ವರೆಗೆ.	58400	-
8.	-ಅದೇ- ಕಿಮೀ 177 ರಿಂದ 178 ಕಿಮೀ.	-	34222
9.	ಸುಳ್ಯ ತಾಲ್ಲೂಕು ಸುಬ್ರಮಣ್ಯ-ಧರ್ಮಸ್ಥಳ-ಬೆಳ್ತಂಗಡಿ-ಕಾರ್ಕಳ-ಉಡುಪಿ ರಸ್ತೆ ಕಿಮೀ 0.0 ರಿಂದ 0.90 ವರೆಗೆ ನವೀಕರಣ.	-	76136
10.	-ಅದೇ- 0.90 ರಿಂದ 1.60 ಕಿಮೀ.ವರೆಗೆ.	-	89833
		273320	248791

ಅನುಬಂಧ-3

ಸುಳ್ಯ ಕ್ಷೇತ್ರದಲ್ಲಿ ಸಾಮಾನ್ಯ ಮತ್ತು ವಿಶೇಷ ದುರಸ್ತಿ ಕಾಮಗಾರಿಗಳಿಗೆ ಆದ ವೆಚ್ಚ

ಕ್ರ.ಸಂ.	ರಸ್ತೆಯ ಹೆಸರು	ಕಿ.ಮೀ. ವ್ಯಾಪ್ತಿ ರಿಂದ-ವರೆಗೆ	ವೆಚ್ಚ 1994-95	1995-96
1.	ಮೈಸೂರು-ಬಂಟ್ವಾಳ ರಸ್ತೆ	148.50-186.20	717622	545191
2.	ಸುಬ್ರಹ್ಮಣ್ಯ-ಧರ್ಮಸ್ಥಳ-ಬೆಳ್ತಂಗಡಿ-ಕಾರ್ಕಳ-ಉಡುಪಿ ರಸ್ತೆ	0-27	77455	359682
3.	ದರ್ಬೆ-ಸುಬ್ರಹ್ಮಣ್ಯ ರಸ್ತೆ	14-23	121590	258689
4.	ಬೆಳ್ಳಾರೆ-ಬೆಂಗಮಲ್ ಫೈಚಾರ್ ರಸ್ತೆ	0-11	98845	95132
5.	ಜಾಲ್ಸೂರು-ಸುಬ್ರಹ್ಮಣ್ಯ ರಸ್ತೆ	0-40	141411	447812
6.	ಎಲಿಮಲೆ-ಅರಂತೋಡು ರಸ್ತೆ	0-13.60	28055	50720
7.	ಗುರದ್ಯ-ಕುಲ್ಕುಂದ ರಸ್ತೆ	6-16	54478	40274
8.	ಅದಿಯಡ್ಕ-ನಿಂತಿಕಲ್‌ಕಟ್ಟೆ ರಸ್ತೆ	17.60-23.60	7497	108437
9.	ಉಬರಡ್ಕ-ಮಿತ್ತೂರು ರಸ್ತೆ	0-9.80	693	82756
10.	ಜಾಲ್ಸೂರು-ಕಾಸರಗೋಡು ರಸ್ತೆ	48.50-20	2438	48427
11.	ಬಿಸ್ಲ ಘಾಟ್ ರಸ್ತೆ	5.50 ರಿಂದ 32.50 ಮತ್ತು 47 ರಿಂದ 51.20	73058	196219

ಕ್ರ.ಸಂ.	ರಸ್ತೆಯ ಹೆಸರು	ಕಿ.ಮೀ. ವ್ಯಾಪ್ತಿ ರಿಂದ-ವರೆಗೆ	ವೆಚ್ಚ 1994-95	1995-96
12.	ಅಯ್ಯನಕಟ್ಟೆ-ಚೊಕ್ಕಾಡಿ-ಬೆಂಗಮಲ್ ರಸ್ತೆ	0-11-60	79267	43282
13.	ಪುದ್ದೊಟ್ಟು-ಬೆಳ್ಳಾರೆ ರಸ್ತೆ	0-10.00	15824	23660
14.	ಕಾಣಿಯೂರು-ಚಾರ್ವಾಕ ಬರೆಪ್ಪಾಡಿ ರಸ್ತೆ	0-9.60	63504	39552
			1481737	2339833

ಪಿಡಬ್ಲ್ಯುಡಿ 31 ಸಿಕ್ಯೂ ಎನ್ 97

ಪ್ರಶ್ನೆ ಸಂಖ್ಯೆ: 384

ಅನುಬಂಧ

ವಿಧಾನ ಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 384

30 ಲಕ್ಷ ರೂ.ಗಳ ಮೊತ್ತದ ಪ್ರತಿ ವಿಧಾನ ಸಭಾ ಕ್ಷೇತ್ರವಾರು ಕಾಮಗಾರಿ - ಜನವರಿ 1997ರ ಅಂತ್ಯಕ್ಕೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಮಂಜೂರಾತಿ ಮೊತ್ತ	96-97ರ ಅನುದಾನ
	ಸುಳ್ಯ ಕ್ಷೇತ್ರ		
1.	ಸುಳ್ಯ ತಾಲ್ಲೂಕು ಎಲ್.ಎಮ್.ಲ್.ಎ ಅರಂತೋಡು ರಸ್ತೆ-ಕಿ.ಮೀ. 8.25 ರಿಂದ 13.025 ದಾಮಾರು ರಸ್ತೆಗೆ ಸೀಲ್‌ಕೋಟ್ ಒದಗಿಸುವುದು.	2.50 ಸಿಇಆರ್ 826: 95-96	0.70
2.	-ಅದೇ- ಮೈಸೂರು ಬಂಟವಾಳ ರಸ್ತೆ ಕಿ.ಮೀ. 171.10 ರಿಂದ 172.60 ವರೆಗೆ ರಸ್ತೆ ಅಗಲಗೊಳಿಸಿ ಡಾಂಬರೀಕರಣ.	6.50 ಸಿ.ಆರ್ 82: 95-96	2.00
3.	-ಅದೇ- ಉಬರಡ್ಕ ಪುತ್ತೂರು ರಸ್ತೆ ಕಿ.ಮೀ. 4.00 ರಿಂದ 6.20 ರವರೆಗೆ ಡಾಂಬರೀಕರಣ.	5.00 ಸಿ.ಆರ್ 71: 95-96	1.50
4.	-ಅದೇ- ಅಯ್ಯನಕಟ್ಟೆ ಚೊಕ್ಕಾಡಿ ಬೆಂಗಮಲ್ ರಸ್ತೆ ಕಿ.ಮೀ. 5.00 ರಿಂದ 7.10 ರವರೆಗೆ ಡಾಂಬರೀಕರಣ.	8.00 ಸಿ.ಆರ್ 66: 95-96	2.00
5.	-ಅದೇ- ಪುದ್ದೊಟ್ಟು ಬೆಳ್ಳಾರೆ ರಸ್ತೆ ಕಿ.ಮೀ 0.60 ರಿಂದ ಕಿ.ಮೀ. 2.35 ರವರೆಗೆ ಡಾಂಬರೀಕರಣ.	5.00 ಸಿ.ಆರ್ 53: 95-96	1.65
6.	ಪುತ್ತೂರು ತಾಲ್ಲೂಕಿನ ಚಾರ್ವಾಹಕ ಕಾಣಿಯೂರು ರಸ್ತೆ ಕಿ.ಮೀ. 5.60 ರಿಂದ 7.00 ರವರೆಗೆ ಜಲ್ಲಿ ಹಾಕಿ ಡಾಂಬರೀಕರಣ.	5.00 ಸಿ.ಆರ್ 55: 95-96	1.65
	ಒಟ್ಟು		9.50

3:96ರ ವರೆಗಿನ ವೆಚ್ಚ	96-97ನೇ ಸಾಲಿನ ವೆಚ್ಚ			ಮುಂದುವರಿದ ವೆಚ್ಚ	ಕಾಮಗಾರಿಯ ವಿವರ
	ಹಿಂದಿನ ತಿಂಗಳ ವೆಚ್ಚ	ಈ ತಿಂಗಳ ವೆಚ್ಚ	ಈ ವರ್ಷದ ವೆಚ್ಚ		
0.80	1.61	-	1.61	2.41	ಕಾಮಗಾರಿ ಮುಗಿದಿದೆ.
-	1.64	0.04	1.68	1.68	ಜಲ್ಲಿ ಕೆಲಸ ಮುಗಿದಿದೆ ಡಾಂಬರೀಕರಣ ಬಾಕಿ ಇದೆ.
-	1.29	0.04	1.33	1.33	ಜಲ್ಲಿ ಹಡರು ಮತ್ತು ಡಾಂಬರೀಕರಣ ಮುಗಿದಿದೆ.
-	0.01	2.94	2.95	2.95	ಜಲ್ಲಿ ಪದರು ಹಾಕಲಾಗಿದೆ ಡಾಂಬರೀಕರಣ ಮಾಡಬೇಕಾಗಿದೆ.
-	1.41	-	14.41	1.41	-ಅದೇ-
-	-	-	-	-	-ಅದೇ-
0.80	5.96	3.02	8.98	9.78	

ಶ್ರೀ ಎಸ್. ಅಂಗಾರ:- ಮಾನ್ಯ ಅಧ್ಯಕ್ಷರೆ, 1994-95ನೇ ಸಾಲಿಗೆ 16 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ 10.20 ಲಕ್ಷ ಮಾತ್ರ ಖರ್ಚಾಗಿದೆಯೆಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಅದೇ ರೀತಿ 1995-96ರ ಸಾಲಿಗೆ 22 ಲಕ್ಷ ಅನುದಾನವನ್ನು ಕೊಡಲಾಗಿದೆ ಮತ್ತು ಅದರಲ್ಲಿ 20.72 ಲಕ್ಷ ಖರ್ಚಾಗಿದೆಯೆಂದು ಹೇಳಿದ್ದಾರೆ. 1994-95 ಮತ್ತು 1995-96ರ ಎರಡೂ ಸಾಲಿನಲ್ಲೂ ಕೊಟ್ಟರತಕ್ಕಂಥ ಹಣದಲ್ಲಿ ಖರ್ಚಾಗದೆ ಉಳಿಕೆಯಾಗಿದೆ. ಪ್ರತಿ ವರ್ಷ ರಸ್ತೆಯ ದುರಸ್ತಿ ಮತ್ತು ಡಾಂಬರೀಕರಣ ಮಾಡದೇ ಇರುವುದರಿಂದ ನಮ್ಮ ಕ್ಷೇತ್ರದ ರಸ್ತೆಗಳ ಎರಡೂ ಪಕ್ಕಗಳಲ್ಲಿ ಹಳ್ಳಗಳಾಗಿ ವಾಹನಗಳು ಓಡಾಡುವುದಕ್ಕೆ ಬಹಳ ಕಷ್ಟವಾಗಿದೆ. ಕೊಟ್ಟಿರುವ ಹಣದಲ್ಲಿ ಈ ರೀತಿ ಖರ್ಚು ಮಾಡದೆ ಉಳಿಕೆ ಮಾಡಿದರೆ, ಖಂಡಿತವಾಗಿ ರಸ್ತೆಗಳನ್ನು ದುರಸ್ತಿ ಮಾಡಿಸುವುದಕ್ಕಾಗುವುದಿಲ್ಲ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಸಚಿವರು ಎಚ್ಚರಿಕೆ ನೀಡಿ ಕೊಟ್ಟಿರತಕ್ಕಂಥ ಅನುದಾನವನ್ನು ಪೂರ್ತಿ ಖರ್ಚು ಮಾಡಿ ಕೆಲಸ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

11.30 ಎಎಂ.

ಶ್ರೀ ಸಿ.ಎಂ. ಉದಾಸಿ:- ಶಾಸಕರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಇವರು ಸೂಚನೆ ಕೊಟ್ಟರು. ಇಲಾಖೆಯಲ್ಲಿ ಡಾಂಬರ್ ಇಲ್ಲದಿದ್ದರೆ ಏನು ಮಾಡುವುದಕ್ಕೆ ಸಾಧ್ಯ? ಡಾಂಬರು ಇರುವುದಿಲ್ಲ. ಮಂತ್ರಿಗಳು ಸೂಚನೆ ಕೊಡುತ್ತಾರೆ. ಡಾಂಬರ್ ಇಲ್ಲದ ದುಡ್ಡು ಹೇಗೆ ಖರ್ಚು ಮಾಡುವುದು? ಕರ್ನಾಟಕ ರಾಜ್ಯದ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಸುಳ್ಳ ಮತ್ತು ಪುತ್ತೂರಿಗೆ ಒಬ್ಬರೇ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ನನಗೆ ನಿನ್ನೆ ರಾತ್ರಿ ಕೂಡ ಫೋನ್ ಮಾಡಿ ಹೇಳಿದ್ದಾರೆ. ನಮಗೆ ಅಲ್ಲಿ ಡಾಂಬರು ಇಲ್ಲದ ಕಾರಣ, ಎಲ್ಲಾ ಕಾರ್ಯಗಳೂ ಸ್ಥಗಿತವಾಗಿವೆ. ನಾವು ಕೇಳಿದ್ದ ಡಾಂಬರನ್ನು ನಮಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತಿಲ್ಲ; ಕನಿಷ್ಠ ದುಡ್ಡಾದರೂ ಕೊಟ್ಟರೆ, ಮಂಗಳದಲ್ಲಿ ಎಂಆರ್ ಫಿಎಲ್‌ನಲ್ಲಿ ಬೇಕಾದಷ್ಟು ಡಾಂಬರು ಇದೆ. ನಾಳೆ ನಾವು ಖರೀದಿ ಮಾಡಿ, ಡಾಂಬರೀಕರಣ ಮಾಡುತ್ತೇವೆಂದು ಹೇಳುತ್ತಾರೆ, ಆದರೆ, ಸಂಬಂಧಪಟ್ಟ ಇಲಾಖೆಯವರು ಅದನ್ನು ಮಾಡುತ್ತಿಲ್ಲ.

ಅಧ್ಯಕ್ಷರು:- ನೋಡುವ.

ಶ್ರೀ ಸಿ.ಎಂ. ಉದಾಸಿ:- ಈಗ ಡಾಂಬರ್ ಸರಬರಾಜು ಮಾಡುವ ಸಲುವಾಗಿ ಈಗಾಗಲೇ ಹಣವನ್ನು ತುಂಬಿದೆ. ಈಗ ಸಧ್ಯ ಬರುತ್ತಿದೆ. ಮಾರ್ಚ್ 31 ರಿಂದ ಏಪ್ರಿಲ್ ಒಳಗಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಮುಗಿಸುತ್ತೇವೆ. ತಾವು ಗಾಬರಿಪಡಬೇಕಾಗಿಲ್ಲ.